**ಅಸಲು ದಾವಾ ನಂಃ 9/2020**
**ಪಿ.ಡಬ್ಲ್ಯೂಃ 2 ,**

<u>ದಿನಾಂಕ :**20-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು :- ಶ್ರೀ . ಜಿ.ಎಸ್. ಎಚ್ ಪ್ರತಿವಾದಿ ಪರ ವಕೀಲರಿಂದ :</u>

ನಾನು ಬಿ.ಕಾಂ. ಪದವಿಧರ. ನಮ್ಮ ತಂದಗೆ ಮಲ್ಲಪ್ಪ, ಮಲ್ಲಿಕಾರ್ಜುನ, ಮಲ್ಲಣ್ಣ ಅಂತಾ ಕರೆಯುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ಮಲ್ಲಪ್ಪ ಮತ್ತು ಮಲ್ಲಣ್ಣ ಅಂತಾ ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಮಲ್ಲಪ್ಪ ಅಂತಾ ಸಹಿ ಮಾಡುತ್ತಿದ್ದರು ಅಂತಾ ನುಡಿಯುತ್ತಾರೆ. ನನ್ನ ಅಜ್ಜನ ಹೆಸರು ಕಾಶಿರಾಯ, ಅವರನ್ನು ಕಾಶೇಪ್ಪ ಅಂತಾ ಸಹ ಕರೆಯುತ್ತಿದ್ದರು. ಕಾಶಿರಾಯನಿಗೆ ಶರಣಮ್ಮ ಎನ್ನುವ ಮಗಳು ಇದ್ದಳು ಎಂದರೆ ಸರಿಯಲ್ಲ. ನನ್ನ ತಾಯಿ ಹೆಸರು ಕವಿತಾ ಅಂದರೆ ಸರಿ. ನಮ್ಮ ತಾಯಿ ಶರಣಮ್ಮನ ಮಗಳು ಎಂದರೆ ಸರಿ. ನನ್ನ ತಂದೆ ಸಹೋದರಅತ್ತೆಯ ಮಗಳನ್ನು ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿ.

ನಮ್ಮ ತಂದೆ ತಮ್ಮ ಜೀವಿತಾ ಅವಧಿಯಲ್ಲಿ ಇಟಗಾ ಗ್ರಾಮದಲ್ಲಿ ವಾಸ ಇದ್ದರು ಅಂದರೆ ಸರಿ. ಅವರು ಇಟಗಾ ಗ್ರಾಮದಲ್ಲಿ ಮರಣ ಹೊಂದಿಲ್ಲಾ, ಆಸ್ಪತ್ರೆ ಯಲ್ಲಿ ಮರಣ ಹೊಂದಿದ್ದಾರೆ. ನಮ್ಮ ಅಜ್ಜನ ಕಾಶಿರಾಯನ ತಂದೆ ಯಂಕಪ್ಪ. ನಮ್ಮ ಅಜ್ಜನ ಕಾಶಿರಾಯನ ತಂದೆ ಯಂಕಪ್ಪ ಮುಡಬೂಳ ಗ್ರಾಮದವರು ಎಂದರೆ ಸರಿ. ಯಂಕಪ್ಪ ರವರು ತಮ್ಮ ಜೀವಿತ ಅವಧಿಯಲ್ಲಿ ಇಟಗಾ ಗ್ರಾಮಕ್ಕೆ ಬಂದು ವಾಸ ಇದ್ದರು ಎಂದರೆ ಸರಿ. ಯಂಕಪ್ಪ ಇವರು ಇಟಗಾ ಗ್ರಾಮದಲ್ಲಿ ಬಂದು ನೆಲಿಸಿದ ನಂತರ ನಮ್ಮ ಕಾಶಿರಾಯ ಖಾಯಂ ಇಟಗಾ ಗ್ರಾಮದಲ್ಲಿ ನೆಲೆಸಿದ್ದಾರೆ ಎಂದರೆ ಸರಿ.

1 ನೇ ಪ್ರತಿವಾದಿ ನನ್ನ ದೊಡ್ಡಪ್ಪ. 1 ನೇ ಪ್ರತಿವಾದಿ ಮದುವೆ ಆದ ನಂತರ ಚಿತ್ತಾಪೂರ ಗ್ರಾಮದಲ್ಲಿ ನೆಲೆಸಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಕಳೆದ 22 ವರ್ಷಗಳಿಂದ ಚಿತ್ತಾಪೂರದಲ್ಲಿ ವಾಸ ಇದ್ದಾರೆ ಎಂದರೆ ಸರಿ. ನನ್ನ ತಂದೆ ಮತ್ತು 2 ನೇ ವಾದಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿಗೆ ತಾಯಿ ಆಗಬೇಕು ಎಂದರೆ ಸರಿ. ನನ್ನ ತಂದೆ 2 ನೇ ವಾದಿ ಮತ್ತು 1 ನೇ ಪ್ರತಿವಾದಿ ಕೂಡಿ ಇದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಬೇರೆ ಇದ್ದಾರೆ ಎಂದರೆ ಸರಿ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು. ಸರ್ವೆ ನಂ: 63 ರ ಇದು ಒಂದೇ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಉಳಿದ ಆಸ್ತಿಗಳು ಸರ್ವೆ ನಂ: 63 ರಿಂದ ಬಂದತಂಹ ಆದಾಯದಿಂದ ಖರಿದಿಸಲಾಗಿದೆ ಎಂದರೆ ಸಾಕ್ಷಿ ಅವು ಸಹ ಪಿತ್ರಾರ್ಜಿತ ಆಸ್ತಿಗಳು ಅಂತಾ ನುಡಿಯತ್ತಾರೆ. ಸರ್ವೆ ನಂ: 63 ಒಟ್ಟು 23.4 ಎಕರೆ ಇದ್ದು, ನಾವು ದಾವಾ ಆಸ್ತಿ 15.33 ಎಕರೆ ಯಾಕೇ ತೋರಿಸಿದ್ದಿರಿ ಎಂದರೆ ಸಾಕ್ಷಿ ಅದು ಒಟ್ಟು 15.33 ಎಕರೆ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ: 63 ರಲ್ಲಿ 23.4 ಎಕರೆ ಇದ್ದು ಅದ ಪೈಕಿ 7-11 ಎಕರೆ ಶರಣಮ್ಮ ಗಂಡ ಶರಣಪ್ಪ ಇವರ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸಾಕ್ಷಿ ಕಾಶಿರಾಯ, ಯಂಕಪ್ಪ, ಸಿದ್ದಣ್ಣ ಇವರು ಅವರ ತಂಗಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಶರಣಮ್ಮ ಗಂಡ ಶರಣಪ್ಪ ಇವರಿಗೆ ಹೇಗೆ ಕೊಟ್ಟಿದ್ದಾರೆ ಎಂದು ಗೊತ್ತಿಲ್ಲಾ. ಶರಣಮ್ಮ ಗಂಡ ಶರಣಪ್ಪ ಇವರು ಸರ್ವೆ ನಂ: 63 ರಲ್ಲಿ ನೇರವಾಗಿ ತಮ್ಮ ಹೆಸರಿನಲ್ಲಿ ಪಹಣಿ ಮಾಡಿಕೊಂಡಿದ್ದು ಶರಣಣಮ್ಮ ಇವರ ಮಗಳನನ್ನು ನನ್ನ ತಂದೆ ಮದುವೆ ಮಅಡಿಕೊಟ್ಟ ಕಾರಣ ನೇರವಾಗಿ ಆ ಆಸ್ತಿಯನ್ನು ಶರಣಮ್ಮಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಇದಕ್ಕಿಂತ ಮೊದಲು ಬಿಟ್ಟುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ಇಟಗಾ ಗ್ರಾಮದಲ್ಲಿ ಸ.ನ. 131/1, 14 , 15 , 101 ಇರಬಹುದು. ಮುಡಬೂಳ ಗ್ರಾಮದಲ್ಲಿ ಸ.ನ 63, 66, 214 ಇವೆ. ಭಾಗೋಡಿ ಗ್ರಾಮದಲ್ಲಿ ಸ.ನ. 215, 198 ಇವೆ. ಇಟಗಾ ಗ್ರಾಮದಲ್ಲಿ ಎಷ್ಟು ಆಸ್ತಿಗಳು ಇವೆ ಎಂದರೆ ನಾನು ಎಣಿಸಿಲ್ಲಾ. ಇಟಗಾ ಗ್ರಾಮದಲ್ಲಿ 19 ಎಕರೆ, ಮುಡಬೂಳ ಗ್ರಾಮದಲ್ಲಿ 32 ಎಕರೆ. ಇಟಗಾ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ 28 ಎಕರೆ, ಮುಡಬೂಳ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ 29 ಎಕರೆ ಇದೆ ಎಂದರೆ ಸರಿ.

ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ  ಇಟಗಾ ಆಸ್ತಿ ನಮ್ಮ ತಂದೆ ಮತ್ತು ಮುಡಬೂಳ ಆಸ್ತಿ 1 ನೇ ಪ್ರತಿವಾದಿಗೆ ಎಂದು ಮೌಖಿಕವಾಗಿ ಪಾಲು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟಿ ಸವಾಲಿಗಾಗಿ ಕಾಲವಕಾಶ ಕೋರಿದ್ದರಿಂದ, ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.